# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸ.ನಿ.ನ.ಯೋ/ಬೊ.ವ/ಎಲ್.ಪಿ/0366/22-23.

ಸಹಾಯಕ ನಿರ್ದೇಶಕರು ನಗರ ಯೋಜನೆ
(ಬೊಮ್ಮನಹಳ್ಳಿ) ವಲಯ ರವರ ಕಛೇರಿ, ಬೇಗೂರು
ರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು-560068.
ದಿನಾಂಕ: 30/09/2022.

ಅನುಸೂಚಿ-VII
(ಉಪವಿಧಿ ಸಂಖ್ಯೆ: 5.3)

## ಪ್ರಾರಂಭಿಕ ಪ್ರಮಾಣ ಪತ್ರ

**ವಿಷಯ:-** ಸುವರ್ಣ ಪರವಾನಗಿ ಎಲ್.ಪಿ. ಸಂಖ್ಯೆ: 0366/22-23, ಪಿ.ಆರ್.ಜೆ ಸಂಖ್ಯೆ: 2260/22-23, ದಿನಾಂಕ: 03/06/2022ರಲ್ಲಿ ವಸತಿ ಕಟ್ಟಡ ನಕ್ಷೆಯ ಪರವಾನಗಿ ನೀಡಲಾಗಿದ್ದು, ಸದರಿ ಸ್ವತ್ತಿನಲ್ಲಿ ಕಾಮಗಾರಿ ಪ್ರಾರಂಭಿಸಿದ್ದು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:-** ಅರ್ಜಿದಾರರ ಮನವಿ ಪತ್ರ ದಿನಾಂಕ: 07/09/2022.

********

ವಾರ್ಡ್ ಸಂಖ್ಯೆ: 188ರಲ್ಲಿನ ಸ್ವತ್ತಿನ ಖಾತಾ ಸಂಖ್ಯೆ: 1285/1284/1261/948ಡಿ, ವಿಜಯಾ ಬ್ಯಾಂಕ್ ಲೇಔಟ್, ಬಿಳೇಕಹಳ್ಳಿ, ಬೆಂಗಳೂರು ಕಟ್ಟಡವನ್ನು ಪರಿವೀಕ್ಷಣೆ ಮಾಡಲಾಗಿ ಈ ಸ್ವತ್ತಿನಲ್ಲಿ ನಿರ್ಮಿಸಿರುವ ವಸತಿ ಕಟ್ಟಡದ ಆರ್.ಸಿ.ಸಿ ತಳಪಾಯ ಸ್ಥಂಭಗಳನ್ನು ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ರವರ ಕಛೇರಿ ಎಲ್.ಪಿ ಸಂಖ್ಯೆ: 0366/22-23, ಪಿ.ಆರ್.ಜೆ ಸಂಖ್ಯೆ: 2260/22-23, ದಿನಾಂಕ: 03/06/2022ರನ್ವಯ ಸ್ಟಿಲ್ಟ್, ನೆಲ, ಒಂದು ಮತ್ತು ಎರಡನೇ ಅಂತಸ್ತಿನ ವಸತಿ ಕಟ್ಟಡಕ್ಕೆ ಪರವಾನಿಗೆ ನೀಡಿರುವ ನಕ್ಷೆಯ ಪ್ರಕಾರ ಪರಿಶೀಲಿಸಲಾಗಿ, ಸ್ಥಳದಲ್ಲಿನ ನಡುಜಾಗಗಳು ಮಂಜೂರಾತಿ ನೀಡಿರುವ ನಕ್ಷೆಯ ಪ್ರಕಾರ ಇರುವುದಾಗಿ ಕಂಡುಬಂದಿದೆ. ಆದ್ದರಿಂದ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಕಾಮಗಾರಿಯನ್ನು ಮುಂದುವರಿಸಲು ಈ ಮೂಲಕ ಪ್ರಾರಂಭಿಕ ಪ್ರಮಾಣ ಪತ್ರ ನೀಡಲಾಗಿದೆ.

1. ಯಾವುದೇ ಬದಲಾವಣೆಗಳನ್ನಾಗಲಿ, ಮಾರ್ಪಾಡುಗಳನ್ನಾಗಲಿ ಅಥವಾ ಉಲ್ಲಂಘನೆಗಳನ್ನಾಗಲೀ ಮಾಡದೇ ಕಟ್ಟುನಿಟ್ಟಾಗಿ ಮಂಜೂರಾತಿ ನೀಡಿರುವ ನಕ್ಷೆಯ ಮತ್ತು ಕಟ್ಟಡ ಉಪವಿಧಿಗಳ ಪ್ರಕಾರವೇ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದು.
2. ಕಾಮಗಾರಿಯು, ಅಡಿಪಾಯದ ಅಥವಾ ಸ್ಥಂಭಗಳ ಆಧಾರ ಅಥವಾ ಸ್ಥಂಭಗಳ ಸ್ಥಿರೀಕರಣ ಕಾರ್ಯವು ಪೂರ್ಣಗೊಂಡ ಹಂತವನ್ನು ತಲುಪಿದಾಗ ನಿರ್ಮಾಣವನ್ನು ಮಂಜೂರಾತಿ ನೀಡಿರುವ ನಕ್ಷೆಯ ಮತ್ತು ಕಟ್ಟಡದ ಉಪವಿಧಿಗಳ ಪ್ರಕಾರ ಕೈಗೊಂಡಿರುವ ಬಗ್ಗೆ ಕಾಮಗಾರಿಯನ್ನು ಪರಿವೀಕ್ಷಣೆ ಮತ್ತು ಶೋಧನೆ ಮಾಡಲು ನೆರವು ನೀಡುವ ದೃಷ್ಟಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂದೇಶವನ್ನು ಕಳುಹಿಸತಕ್ಕದ್ದು.
3. ಸದರಿ ಸ್ವತ್ತಿನ ಮೇಲೆ ಯಾವುದೇ ನ್ಯಾಯಾಲಯದಲ್ಲಿ ಅಥವಾ ವ್ಯಕ್ತಿಗಳಿಂದ ತಂಟೆ ತಕರಾರು ಬಂದಲ್ಲಿ ನೀಡಲಾಗಿರುವ ಪ್ರಾರಂಭಿಕ ಪ್ರಮಾಣ ಪತ್ರವನ್ನು ಯಾವುದೇ ಮುನ್ಸೂಚನೆ ಇಲ್ಲದೆ ಏಕ ಪಕ್ಷೀಯವಾಗಿ ಹಿಂಪಡೆಯುವ ಷರತ್ತಿಗೊಳಪಟ್ಟಿದೆ.

ಪ್ರಾರಂಭಿಕ ಪ್ರಮಾಣ ಪತ್ರದ ನಿಗದಿತ ಶುಲ್ಕಕ್ಕಾಗಿ ರೂ. 15,000/-ಗಳ ಡಿ.ಡಿ ಸಂಖ್ಯೆ: 015276, ದಿನಾಂಕ: 29/09/2022 ರಲ್ಲಿ ಪಡೆದು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಡಿ.ಡಿಯನ್ನು ರಶೀದಿ ಸಂಖ್ಯೆ: RE-ifms458-TP/000029, ದಿನಾಂಕ: 30/09/2022ರನ್ವಯ ಬಿ.ಬಿ.ಎಂ.ಪಿ ಬೊಕ್ಕಸಕ್ಕೆ ಪಾವತಿಸಲಾಗಿರುತ್ತದೆ.

- ಸಹಿ -
ಸಹಾಯಕ ನಿರ್ದೇಶಕರು
ನಗರ ಯೋಜನೆ (ಬೊಮ್ಮನಹಳ್ಳಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರವರಿಗೆ,**

Sri. Nynaru Maheswar,
No. 1285/1284/1261/948D,
Vijaya Bank Layout, Bilekahalli,
Ward No-188, Bengaluru.

Vmaheswar 30/09/22

ಪು.ತಿ.ನೋ.

**ಪ್ರತಿಯನ್ನು:**

1. ಸಹಾಯಕ ಕಾರ್ಯಪಾಲಕ ಅಭಿಯಂತರರು, (ಬೊಮ್ಮನಹಳ್ಳಿ) ಉಪ ವಿಭಾಗ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2. ಕಛೇರಿ ಪ್ರತಿ.

ಸಹಾಯಕ ನಿರ್ದೇಶಕರು
ನಗರ ಯೋಜನೆ (ಬೊಮ್ಮನಹಳ್ಳಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ